ಕ್ರ. ಸಂ.	ಜಿಲ್ಲೆ/ತಾಲ್ಲೂಕು	ವರ್ಷಾವಾರು ನೀಡಿರುವ ಸಹಾಯಧನ			
		2006–07	2007–08	2008–09	ಒಟ್ಟು
176	ಮಳವಳ್ಳಿ	3.73	9.46	1.54	14.73
177	ಮಂಡ್ಯ	8.08	10.62	4.28	22.98
178	ನಾಗಮಂಗಲ	5.24	10.99	2.43	18.66
179	ಪಾಂಡವಪುರ	3.08	10.69	11.34	25.11
180	ಶ್ರೀರಂಗಪಟ್ಟಣ	2.43	15.91	2.48	20.82
	ಒಟ್ಟು	**30.04**	**77.84**	**26.02**	**133.90**
	ರಾಜ್ಯದ ಒಟ್ಟು	**5434.62**	**11312.97**	**10800.75**	**27548.34**

427 ಶ್ರೀ ಪಾಟೀಲ್ ಎ.ಎಸ್. : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)

ಆ) 2007–08ನೇ ಸಾಲಿಗೆ ಬ್ಯಾಂಕುಗಳಲ್ಲಿ ನಡೆಸಲಾಗಿರುವ ಲೆಕ್ಕ ಪರಿಶೋಧನೆಯಂತೆ ಯಾವ ಯಾವ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಯಾವ ಯಾವ ಆಡಿಟ್ ವರ್ಗದಲ್ಲಿ ಕಾರ್ಯ ನಿರ್ವಹಿಸುತ್ತಿವೆ;

ಇ) ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕುಗಳು ಯಾವುವು;

ಈ) ಈ ಬ್ಯಾಂಕುಗಳು ನಷ್ಟಕ್ಕೊಳಗಾಗಲು ಕಾರಣಗಳೇನು; ಅಂತಹ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಮೇಲೆ ಸರ್ಕಾರದ ಕ್ರಮವೇನು?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು):

ಅ) ರಾಜ್ಯದಲ್ಲಿ 21 ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಅನುಬಂಧದಲ್ಲಿ ವಿವರಗಳನ್ನು ಲಗತ್ತಿಸಿದೆ.

ಇ) ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ 6 ಬ್ಯಾಂಕುಗಳು ಅಂದರೆ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಕೊಡಗು, ಬಾಗಲಕೋಟೆ ಮತ್ತು ಬೆಳಗಾವಿ ಡಿಸಿಸಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.

ಈ) ರಾಜ್ಯದ 21 ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಪೈಕಿ 2 ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಅಂದರೆ ಕೆ.ಸಿ.ಸಿ. ಬ್ಯಾಂಕ್ ನಿ., ಧಾರವಾಡ ಮತ್ತು ಕೋಲಾರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಇವುಗಳು ಕ್ರೋಢೀಕೃತ ನಷ್ಟವನ್ನು ಹೊಂದಿರುತ್ತವೆ. ಈ ಬ್ಯಾಂಕುಗಳು ನಷ್ಟವನ್ನು ಹೊಂದಲು ಕಾರಣಗಳೆಂದರೆ, ಸಾಲಗಳನ್ನು ಮಂಜೂರು ಮಾಡುವ ಪೂರ್ವದಲ್ಲಿ ಆಡಳಿತ ಮಂಡಳಿಯವರು ಸಾಲ ಮರುಪಾವತಿಸುವ ಸಾಮರ್ಥ್ಯ ಹಾಗೂ ಸೂಕ್ತ ಭದ್ರತೆ ಪಡೆಯದೆ ಸಾಲ ಮಂಜೂರು ಮಾಡಿರುವುದು. ನಬಾರ್ಡ್ ಹಾಗೂ ಅಪೆಕ್ಸ್ ಬ್ಯಾಂಕುಗಳು ನೀಡಿರುವ ಸೂಚನೆಗಳನ್ನು ಪಾಲನೆ ಮಾಡದೇ ಇರುವುದು ಇತ್ಯಾದಿ.

ಕೆ.ಸಿ.ಸಿ. ಬ್ಯಾಂಕ್ ನಿ., ಧಾರವಾಡ, ಈ ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಗಾರರನ್ನು ನೇಮಕ ಮಾಡಲಾಗಿದ್ದು, ದಿನಾಂಕ 27.7.2008ರಂದು ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸಲಾಗಿದೆ. ಕೋಲಾರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ದಿನಾಂಕ 21.8.2004 ರಿಂದ ವಿಶೇಷಾಧಿಕಾರಿಯನ್ನು ನೇಮಿಸಿದೆ.